<u>**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ., ಹುಣಸೂರು.**</u>

**ಸಿ.ಸಿ. ಸಂಖ್ಯೆಃ 3416/22**

**ಸಾಕ್ಷಿಯನ್ನು ದಿಃ 30.01.2024 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

ಹೆಸರು ರಮೇಶ ಆರ್. ಪಿ.ಡಬ್ಲ್ಯೂಃ **2**
ತಂದೆಯ ಹೆಸರು ಲೇಟ್ ರಾಮಶೆಟ್ಟಿ
ವಯಸ್ಸು **54** ವರ್ಷ
ಕೆಲಸ ಎ.ಎಸ್.ಐ. ಹುಣಸೂರು ಪಟ್ಟಣ ಠಾಣೆ
ವಾಸಸ್ಥಳ ಕೆ.ಆರ್.ನಗರ

<u>ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ</u>

1. ನಾನು ದಿಃ 27.08.2022 ರಿಂದ ಈವರೆಗೆ ನಾನು ಹುಣಸೂರು ಪಟ್ಟಣ ಠಾಣೆಯಲ್ಲಿ ಎ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 05.08.2023 ರಂದು ಹುಣಸೂರು ಪಟ್ಟಣ, ಗಣೇಶ ಗುಡಿ ಬೀದಿಯಲ್ಲಿ ವಾಸವಾಗಿರುವ ಜಗದೀಶ ಬಿನ್ ವೆಂಕಟಶೆಟ್ಟಿ ಅವರ ಮನೆ ಮುಂಭಾಗ ಪಂಚಾಯತಿದಾರರ ಸಮಕ್ಷಮ ಸಿ.ಸಿ.3416/2022 ರಲ್ಲಿ ಆರೋಪಿ ಜಗದೀಶ ಬಿನ್ ವೆಂಕಟಶೆಟ್ಟಿ ಎಂಬುವವರಿಗೆ ದಿಃ 19.09.2023 ರಂದು ನ್ಯಾಯಾಲಯದ ಮುಂದೆ ಹಾಜರಾಗಬೇಕೆಂದು ಆದೇಶಿಸಲು, ಉದ್ಘೋಷಣೆಯ ಕಾರ್ಯಗತದ ಬಗ್ಗೆ ಮೇಲ್ಕಂಡ ಸ್ಥಳಕ್ಕೆ ಬಂದು ಪಂಚಾಯತಿದಾರರಾದ ರಾಜು ಬಿನ್ ವೆಂಕಟಪ್ಪ, ಶ್ರೀಧರ ಬಿನ್ ಬಸವೇಗೌಡ ಅವರ ಬಳಿ ಆರೋಪಿ ಬಗ್ಗೆ ಕೂಲಂಕುಷವಾಗಿ ವಿಚಾರ ಮಾಡಿದಾಗ ಸದರಿ ಆರೋಪಿ ಸದರಿ ವಿಳಾಸದಲ್ಲಿ 3 ವರ್ಷಗಳ ಹಿಂದೆ ಮನೆ ಖಾಲಿ ಮಾಡಿ ಹೋದವರು ಇದುವರೆಗೆ ಇಲ್ಲಿಗೆ ಬಂದಿಲ್ಲ ಎಂದು ಸದರಿ ಪಂಚಾಯತಿದಾರರು ತಿಳಿಸಿರುತ್ತಾರೆ. ಸದರಿ ಆರೋಪಿ ಪತ್ತೆಯಾದಲ್ಲಿ ದಿಃ 19.09.2023 ರಂದು ನ್ಯಾಯಾಲಯದ ಮುಂದೆ ಹಾಜರಾಗಬೇಕೆಂದು ಸದರಿಯವರಿಗೆ ತಿಳಿಸಿ, ನ್ಯಾಯಾಲಯದ ಆದೇಶದ ಒಂದು ಪ್ರತಿಯನ್ನು ಆರೋಪಿ ಜಗದೀಶ ಬಿನ್

ವೆಂಕಟಶೆಟ್ಟಿ ಅವರ ಮನೆ ವಾಸವಿದ್ದ ಮನೆಯ ಬಾಗಿಲಿಗೆ ಅಂಟಿಸಿ, ಮತ್ತೊಂದು ಪ್ರತಿಯನ್ನು ಹುಣಸೂರು ನಗರಸಭೆ ನೋಟೀಸ್ ಬೋರ್ಡ್ ಗೆ ಅಂಟಿಸಿ, ನಂತರ ಸದರಿ ಗಣೇಶ ಗುಡಿ ಬೀದಿಯಲ್ಲಿ ಟಾಮ್–ಟಾಮ್ ಮಾಡಿಸಿ ನ್ಯಾಯಾಲಯದ ಉದ್ಘೋಷಣೆಯನ್ನು ಏರುಧ್ವನಿಯಲ್ಲಿ ಸಾರಿ–ಸಾರಿ ಹೇಳಲಾಯಿತು. ಉದ್ಘೋಷಣೆಯ ಮತ್ತೊಂದು ಪ್ರತಿಯನ್ನು ನ್ಯಾಯಾಲಯದ ನೋಟೀಸ್ ಬೋರ್ಡ್ ನಲ್ಲಿ ಅಂಟಿಸಿರುತ್ತೇನೆ. ದಿಃ 05.08.2023 ರ ಉದ್ಘೋಷಣೆಯ ಮಹಜರ್ ಅನ್ನು ನಿಪಿ.4 ಎಂದು, ಸಾಕ್ಷಿಯ ಸಹಿಯನ್ನು ನಿಪಿ.4(ಎ) ಎಂದು ಗುರುತಿಸಲಾಯಿತು.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಶಿರಿನ ಜಾವೀದ್ ಅನ್ಸಾರಿ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.